ಕರ್ನಾಟಕ ಸರ್ಕಾರ
ವಾಣಿಜ್ಯ ತೆರಿಗೆ ಇಲಾಖೆ

T.NO-431/21-22

ಸಂಖ್ಯೆ:ವಾತೆಜಂಆ(ಆ)/ವಿ.ಸ.ಸೇ.ತೆ.ಕ–6/ವಾಹನ/
ಸಿಆರ್–07/2021–22

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರವರ ಕಛೇರಿ(ಆಡಳಿತ)
ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–6,
ಕೆಐಎಡಿಬಿ ಕಟ್ಟಡ, ಬಿ–ಬ್ಲಾಕ್, 3ನೇ ಮಹಡಿ,
4ನೇ ಫೇಸ್, ಪೀಣ್ಯ 2ನೇ ಹಂತ, ಬೆಂಗಳೂರು,
ದಿನಾಂಕ:10–08–2021

ಟೆಂಡರ್ ಅಧಿಸೂಚನೆ

ವಿಷಯ : ದಿನಾಂಕ: 01–09–2021 ರಿಂದ 31–08–2022ರ ಅವಧಿಯವರೆಗೆ ಈ ಕಛೇರಿಗೆ ಸಾಮಾನ್ಯ ಟೆಂಡರ್ ಪ್ರಕ್ರಿಯೆ ಮುಖೇನ 6 ಖಾಸಗಿ ವಾಹನಗಳನ್ನು ಬಾಡಿಗೆಗೆ ಪಡೆದುಕೊಳ್ಳುವ ಬಗ್ಗೆ.

ಉಲ್ಲೇಖ : 1) ಸರ್ಕಾರದ ಆದೇಶ ಸಂ. ಸಿಆಸುಇ 96 ಶಿವಾನೀ 2012, ಬೆಂಗಳೂರು, ದಿನಾಂಕ: 23–08–2012.

2) ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರವರ ಪತ್ರ ಸಂ.ವಿಹೆಚ್‌ಟಿ/ಸಿಆರ್–07/2018–19, ದಿನಾಂಕ: 19–07–2021.

3) ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರವರ ಪತ್ರ ಸಂ.ವಿಹೆಚ್‌ಟಿ/ಸಿಆರ್–07/2018–19, ದಿನಾಂಕ: 29–07–2021.

* * * * *

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–5, ಬೆಂಗಳೂರು, ಈ ಕಛೇರಿಯ ಉಪಯೋಗಕ್ಕಾಗಿ 6 (ಆರು) ಖಾಸಗಿ ವಾಹನಗಳನ್ನು ಮಾಸಿಕ ಬಾಡಿಗೆ ಆಧಾರದ ಮೇಲೆ ಪಡೆಯಲು ಉಲ್ಲೇಖದಲ್ಲಿ ತಿಳಿಸಿರುವ ಮಾನ್ಯ ಆಯುಕ್ತರ ಪತ್ರದಲ್ಲಿ ಅನುಮತಿಸಿರುವುದರಿಂದ, ಮಾಲೀಕರೇ ಚಾಲಕರಾಗಿರುವವರಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ. ಆಸಕ್ತ ಒಬ್ಬ ವಾಹನ ಮಾಲೀಕ/ಚಾಲಕರು, ಒಂದು ವಾಹನ ಸೇವೆಗೆ ಮಾತ್ರ ಅರ್ಜಿಯನ್ನು ಸಲ್ಲಿಸುವುದು. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 96 ಶಿವಾನೀ 2012, ದಿ:23.08.2012 ರಲ್ಲಿ ತಿಳಿಸಿರುವ ನಿಯಮಗಳನ್ವಯ ಖಾಸಗಿ ವಾಹನಗಳ ಸೇವೆಯನ್ನು ಪಡೆಯಲಾಗುವುದು.

1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 96 ಶಿವಾನೀ 2012, ಬೆಂಗಳೂರು, ದಿನಾಂಕ: 23.08.2012ರ ಅನ್ವಯ ವಾಹನಗಳ ಬಾಡಿಗೆ ತಿಂಗಳಿಗೆ ಮೊತ್ತ ರೂ.25,000–00 ನೀಡಲಾಗುವುದು.
2. ವಾಹನದ ಮಾದರಿಯು 2015 ಮತ್ತು ನಂತರದಾಗಿರತಕ್ಕದ್ದು, ಪ್ರತಿ ವಾಹನದ ಗುಣಮಟ್ಟವನ್ನು ಹಾಗೂ ಚಾಲನ ಕೌಶಲ್ಯವನ್ನು ಪರಿಶೀಲಿಸಿದ ನಂತರವೇ ವಾಹನಗಳನ್ನು ತೆಗೆದುಕೊಳ್ಳಲಾಗುದು.

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು
ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-6
ಬೆಂಗಳೂರು-560 058